ಇ) ಈ ವಿಷಯವು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್. — ೧೧,೩೫೦ ನೌಕರರಿಂದ ಅಹವಾಲು ಬಂದಿದೆ ಎಂದು ಹೇಳಿರುತ್ತೀರಿ. ವೈಯಕ್ತಿಕವಾಗಿ ಪ್ರತಿಯೊಬ್ಬರೂ ತಮ್ಮ ತಮ್ಮ ಅಹವಾಲುಗಳನ್ನು ವಿರೋಧಭಾಸವಾಗಿ ಕೊಟ್ಟಿರತಕ್ಕಂಥ ವರದಿಗೆ ಸಂಬಂಧ ಪಟ್ಟಂತೆ ಇದೆಯೇ ? ಅಥವಾ ವೈಯಕ್ತಿಕವಾಗಿ ಇದಿಯೇ ? ಈ ೨೧೫ ಸಂಘಗಳಿಂದ ಎಷ್ಟು ಜನ ನೌಕರರು ಪ್ರತಿನಿಧಿಸಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಮೊದಲನೆಯ ಉಪಪ್ರಶ್ನೆಗೆ ಅನೇಕ ಜನ ನೌಕರರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಕೂಡ ಕೊಟ್ಟಿದ್ದಾರೆ. ತಮಗೆ ಆಗಿರತಕ್ಕಂಥ ತೊಂದರೆಗಳ ಬಗ್ಗೆ ಬರೆದಿದ್ದಾರೆ. ಇದು ಕೇವಲ ಅವರ ತೊಂದರೆಗಳ ಬಗ್ಗೆ ಇರತಕ್ಕಂಥ ರೆಪ್ರೆಸೆಂಟೇಷನ್ ಎಂದು ಹೇಳಿ ಬರೆದಿರತಕ್ಕಂಥದ್ದು ಅವರ ಅಭಿಪ್ರಾಯವಾಗಿದೆ.

ಎರಡನೆಯ ಪ್ರಶ್ನೆಗೆ ನಾನು ಹೇಳಿದಹಾಗೆ ೨೧೫ ಬೇರೆ ಬೇರೆ ಸಂಘಗಳು ಇರುತ್ತವೆ. ಜಿಲೆಗಳಿಂದ ಬಂದಿರತಕ್ಕಂಥದ್ದು, ಬೇರೆ ಬೇರೆ ಇಲಾಖೆಗಳಿಂದ ಪ್ರತ್ಯೇಕವಾಗಿ ಸಂಘಗಳಿಂದ ಬಂದಿರತಕ್ಕಂಥದ್ದು ಇದೆ. ಮತ್ತೆ ಎಷ್ಟು ಸರ್ಕಾರಿ ನೌಕರರುಗಳು ಪ್ರತಿನಿಧಿಸಿದ್ದಾರೆಂದು ಕೇಳಿದರೆ ಅದಕ್ಕೆ ಉತ್ತರವನ್ನು ಕೊಡುವುದು ಕಷ್ಟವಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಎಲ್ಲ ಸರ್ಕಾರಿ ನೌಕರರು ಇದನ್ನು ಪ್ರತಿನಿಧಿಸಿರುತ್ತಾರೆಂದು ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್. — ತಾವು ಮೂರನೆಯ ಪ್ರಶ್ನೆಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಅವರು ಕೊಟ್ಟಿರತಕ್ಕಂಥ ಅನೇಕ ನ್ಯೂನ್ಯತೆಗಳು ಮತ್ತು ಸಮಸ್ಯೆಗಳೂ ಸರ್ಕಾರದ ಪರಿಶೀಲನೆಯಲ್ಲಿದೆ ಎಂದೂ ಹೇಳಿ ಅದರ ಪರಿಹಾರಕ್ಕಾಗಿ ಸರ್ಕಾರದ ಒಂದು ಸಮಿತಿಯನ್ನು ಮಾಡಿದ್ದೇವೆಂದು ಹೇಳಿರುತ್ತೀರಿ. ಮತ್ತೆ ಯಾವಾಗ ಅವರು ತೀರ್ಮಾನ ಕೊಡುತ್ತಾರೆ, ಅವರಿಗೆ ಎಷ್ಟು ಟೈಮ್ ಬೇಕಾಗುತ್ತದೆ. ಹಿಂದೆ ಒಂದುಸಾರಿ ಇಂಥದ್ದೇ ಸಮಿತಿಯನ್ನು ಮಾಡಿದ್ದಾಗ ಅವರು ಎರಡು ವರ್ಷಗಳಕಾಲ ಸಮಯ ತೆಗೆದುಕೊಂಡು ತೀರ್ಮಾನ ಕೊಟ್ಟದ್ದು ಕೂಡ ಇದೆ. ಇದರಿಂದ ಅತ್ಯಪ್ತಿ ಜಾಸ್ತಿಯಾಗಿ ಬೆಳೆಯಲು ಅವಕಾಶವಾಗುತ್ತದೆ. ಆದ್ದರಿಂದ ಒಂದು ನಿರ್ದಿಷ್ಟವಾದ ಟೈಮ್ ಬಗ್ಗೆ ಕೇಳಿರುವ ಪ್ರಶ್ನೆಗೆ ಉತ್ತರವನ್ನೂ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ. —ನನ್ನ ಬಡ್ಜೆಟ್ ಭಾಷಣದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ ಅವರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡುತ್ತೇವೆಂದು ಹೇಳಿದ್ದೇವೆ. ಆ ಕಮಿಟಿ ಇನ್ನೂ ರಚನೆ ಆಗಿಲ್ಲ ಅದು ಆದಷ್ಟು ಬೇಗ ರಚನೆ ಆಗುತ್ತದೆ. ಅವರಿಗೆ ಇಂತಿಷ್ಟು ದಿವಸಗಳಲ್ಲಿ ವರದಿ ಕೊಡಬೇಕೆಂದು ಹೇಳುತ್ತೇವೆ. ೩ ತಿಂಗಳಲ್ಲಿ ಅಥವಾ ೬ ತಿಂಗಳಲ್ಲಿ ಕೊಡಬೇಕೆಂದೂ ಹೇಳುತ್ತೇವೆ. ಹಿಂದಿನ ಕಮಿಟಿ ಮಾಡಿದಾಗಲೂ ಸಮಯ ನಿರ್ಬಂಧವನ್ನು ಹಾಕಿದ್ದು ಉಂಟು. ಆದರೆ ಈ ಕಮಿಟಿ ಮುಂದೆ ಎಷ್ಟು ರೆಪ್ರಸಂಟೇಷನ್ ಬರುತ್ತವೆ, ಎಷ್ಟು ಜನ ಹಾಜರಾಗಿ ಅಭಿಪ್ರಾಯ ಕೊಡಬೇಕೆಂದಿದ್ದಾರೆ. ಅದಕ್ಕೆ ಸಮಯ ಎಷ್ಟು ಬೇಕಾಗುತ್ತದೆಂಬುದನ್ನು ನೋಡಬೇಕಾಗುತ್ತದೆ. ಆದ್ದರಿಂದ ಇಂತಿಷ್ಟೇ ದಿವಸಗಳಲ್ಲಿ ಇತ್ಯರ್ಥ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದಷ್ಟು ಬೇಗ ಮಾಡುತ್ತೇವೆ.

ರಾಜ್ಯಕ್ಕೆ ಮ್ಯಾಕ್‌ಡ್ವೆಲ್ ವಿಸ್ಕಿಯ ಪೂರೈಕೆ

೩೩೫. ಶ್ರೀ ಗೋಪಾಲ ಮಂಕಾಂದ ಕಾನಡೆ (ಸಿರ್ಸಿ) ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮ್ಯಾಕ್‌ಡ್ವೆಲ್ ವಿಸ್ಕೀ (ಮದ್ಯಪಾನ) ಯನ್ನು ನಮ್ಮ ರಾಜ್ಯಕ್ಕೆ ಪೂರೈಸುವವರು ಯಾರು? (ಅವರ ಪೂರ್ಣ ವಿವರ ನೀಡುವುದು)

ಆ) ಯಾವ ಯಾವ ಸ್ಥಳಗಳಿಂದ ಸರಬರಾಜು ಮಾಡಲಾಗುವುದು ?

ಇ) ಮ್ಯಾಕ್‌ಡ್ವೆಲ್ ವಿಸ್ಕೀಯಲ್ಲಿ ಡೂಪ್ಲಿಕೇಟ್ ಸರಬರಾಜು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಗುತ್ತಿಗೆದಾರರು ಸರಬರಾಜು ಮಾಡುವಾಗ ತೆರಿಗೆ ಕಟ್ಟದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಈ ಮೇಲ್ಕಂಡ ವಿಷಯಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಊ) ಕುಂಬಳಗೋಡು ಮ್ಯಾಕ್‌ಡೆಲ್ ಕಂಪನಿಯಿಂದ ರಾಜ್ಯಕ್ಕೆ ಸರಬರಾಜು ಮಾಡಲು ಸರ್ಕಾರದವರು ಸದರಿ ಕಂಪನಿಯೊಂದಿಗೆ ಒಪ್ಪಂದವೇನಾದರೂ ಮಾಡಿಕೊಂಡಿದ್ದಾರೆಯೇ ಹಾಗೂ ಒಪ್ಪಂದದ ವಿವರಗಳನ್ನು ಒದಗಿಸುವುದು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಮ್ಯಾಕ್‌ಡೆಲ್ ವಿಸ್ಕಿಯನ್ನು ರಾಜ್ಯದ ಎಲ್ಲಾ ಸಗಟು ಮಾರಾಟ ಮಳಿಗೆಗಳಿಗೆ ಮೆ:ಬಾಲಾಜಿ ಟ್ರೇಡರ್ಸ್ (ಬಾಂಡೆಡ್ ವೇರ್ ಹೌಸ್) ಸಂಖ್ಯೆ: ೫೧ ಮತ್ತು ೫೨ ಎಸ್. ಜಿ. ನಾರಾಯಣ ಲೇಔಟ್ ಬೆಂಗಳೂರು ಇವರು ಸರಬರಾಜು ಮಾಡುತ್ತಾರೆ.

ಆ) ಈ ಕೆಳಕಂಡ ಪಟ್ಟಣಗಳಲ್ಲಿರುವ ಮೆ: ಮ್ಯಾಕ್‌ಡೆಲ್ ಕಂಪನಿಯ ಡಿಸ್ಟಿಲರಿಗಳಿಂದ ಸರಬರಾಜು ಆಗುತ್ತಿದೆ.

೧ ಮದ್ರಾಸ್ ೨ ಪಾಂಡಿಚೇರಿ ೩ ಗೋವಾ ೪ ಶೆರ್‌ತಲೈ (ಕೇರಳ) ೫ ಉದಯಪುರ (ರಾಜಸ್ಥಾನ್) ಮತ್ತು ೬ ಬೆಂಗಳೂರಿನ ಕುಂಬಳಗೋಡು.

ಇ) ಇಲ್ಲ

ಈ) ಇಲ್ಲ

ಉ) ಪ್ರಶ್ನೆ 'ಇ' ಮತ್ತು 'ಈ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಇಲ್ಲ

ಶ್ರೀ ಜೆ. ಎಂ. ಕಾನಡೆ.—ಮ್ಯಾಕ್‌ಡೆಲ್ ವಿಸ್ಕೀ ಬಗ್ಗೆ ಸರ್ಕಾರಕ್ಕೆ ಜವಾಬ್ದಾರಿ ಇದೆಯೇ? ಅವರು ಇಷ್ಟಬಂದ ರೀತಿಯಲ್ಲಿ ಮಾಡಬಹುದೆ ? ಅವರನ್ನು ಕೇಳಲಿಕ್ಕೆ ಹೇಳಲಿಕ್ಕೆ ಸರ್ಕಾರಕ್ಕೆ ಅಧಿಕಾರ ಇದೆಯೇ ಅಥವಾ ಇಲ್ಲವೇ

ಅಧ್ಯಕ್ಷರು.—ಉಪಪ್ರಶ್ನೆಯನ್ನು ನೇರವಾಗಿ ಕೇಳಿ. ಸಿಟ್ಟಿಗೆ ಏಳಬೇಡಿ.

ಶ್ರೀ ಜೆ. ಎಂ. ಕಾನಡೆ.—ಮ್ಯಾಕ್‌ಡೆಲ್ ವಿಸ್ಕೀ ಲೇಬಲ್ ಇರುವ ಅರ್ಧ ಬಾಟಲ್ ವಿಸ್ಕೀಯನ್ನು ೩೦ೇದಿ ಮಾಡಿದರೆ ೪೦ ರೂಪಾಯಿ ಅದಕ್ಕೆ ಬಿಲ್ ಕೇಳಿದರೆ ೫೪ ರೂಪಾಯಿಗೆ ಕೊಡುತ್ತಾರೆ. ಇದು ಡೂಪ್ಲಿಕೇಟ್ ಅನ್ನಿಸುತ್ತದೆ. ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ? ಅಧಿಕಾರಕ್ಕೆ ಬಂದ ಮೇಲೆ ೮೪೪ ಬ್ಯಾಂದಿ ಶಾಪ್‌ಗಳನ್ನು ತೆರೆಯಲಾಯಿತು ಎಂದು ಹೇಳುತ್ತಾರೆ, ಒಂದೊಂದು ಬಾಟ್ಲಿಗೆ ೫–೫ರೂಪಾಯಿ ಹೊಡೆದರೆ ಕೋಟ್ಯಾಂತರ ರೂಪಾಯಿ ಸೇಲ್ಸ್ ಟ್ಯಾಕ್ಸ್ ಇನ್‌ಕಂ ಟ್ಯಾಕ್ಸ್ ಲಾಸ್ ಆಗುತ್ತದೆ. ಅಧಿಕಾರಿಗಳು ಏನು ಮಾಡುತ್ತಾರೆ? * * * ಇದರ ಬಗ್ಗೆ ಸರ್ಕಾರಕ್ಕೆ ಜವಾಬ್ದಾರಿ ಏನಾದರೂ ಇದೆಯೇ ಅಥವಾ ಇಲ್ಲವೇ ?

ಅಧ್ಯಕ್ಷರು.—ಪ್ರಶ್ನೆ ಕೈಬಿಟ್ಟಾಗ ಡೈವರ್ಟ್ ಮಾಡುತ್ತೀರಿ, ಅದಕ್ಕೆ ಅವಕಾಶ ಇಲ್ಲ. ನೇರವಾಗಿ ಉಪಪ್ರಶ್ನೆ ಕೇಳಿ. ಈ ಸಂದರ್ಭದಲ್ಲಿ ರಾಜಕಾರಣದ ಭಾಷಣ ಮಾಡುವುದು ಸರಿಯಲ್ಲ.

ಶ್ರೀ ಜೆ. ಎಂ. ಕಾನಡೆ.—ಮಾಮೂಲು ಅಂದರೆ...

ಶ್ರೀ ಎ. ಲಕ್ಷ್ಮೀಸಾಗರ್.—ದಯವಿಟ್ಟು ಆ ಪದವನ್ನು ಎಕ್ಸ್‌ಪಂಜ್ ಮಾಡಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಕೇಳಿದ್ದೇನೆಂದರೆ...

ಅಧ್ಯಕ್ಷರು.—ಕೇಳುವುದಕ್ಕೆ ಹಕ್ಕಿದೆ ಕೇಳಲಿ, ಕೇಳುವಾಗ ಏನೇನೋ ಯದ್ವಾತದ್ವಾ ಕೇಳಿದರೆ...?

---

†ಅಧ್ಯಕ್ಷರ ಆದೇಶದ ಮೇರೆಗೆ ಗುರುತಿಸಿದ ಭಾಗವನ್ನು ತೆಗೆದುಹಾಕಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೆಲವು ಸೆಕೆಂಡ್ಸ್ ಎಂದು ಹೇಳಿ ಮೂರಿ ಸೇಲ್ಸ್ ಟ್ಯಾಕ್ಸನ್ನು ವಂಚಿಸುತ್ತಾರೆ.

ಅಧ್ಯಕ್ಷರು.—ಅವರ ಪರವಾಗಿ ನೀವೇ ಕೇಳಿ. ಮಾನ್ಯ ಕಾನಡೆಯವರೆ, ನೀವು ಕುಳಿತುಕೊಳ್ಳಿ ಮಧ್ಯಾಹ್ನ ಭಾಷಣ ಮಾಡುವಿರಂತೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—(ಈ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಇದನ್ನೆಲ್ಲ ಕಂಪನಿಗಳು ಸೇಲ್ಸ್ ಟ್ಯಾಕ್ಸ್ ಕೊಟ್ಟು ಮಾಡಬೇಕು. ಇನ್ನೊಂದು ಡೂಪ್ಲಿಕೇಟ್ ಎಂದು ಮಾನ್ಯ ಕಾನಡೆಯವರು ಹೇಳಿದ ಹಾಗೆ ೪೦ ರೂಪಾಯಿಗಳಿಗೆ ಮಾರುತ್ತಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು.—ಅವರು ಇಲ್ಲವೆಂದು ಕೊಟ್ಟಿದ್ದಾರೆ. ಮತ್ತೇನಾದರೂ ಕೇಳುವುದು ಇದ್ದರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಕೇಳಿದ ಪ್ರಶ್ನೆ ಇಷ್ಟೇ. ರಶೀತಿ ಕೊಡುವುದು ೫೪ ರೂಪಾಯಿಗೆ ಆದರೆ ಡೂಪ್ಲಿಕೇಟ್ ವಿಸ್ಕೀ ಕೊಡುವುದು ೪೦ ರೂಪಾಯಿಗೆ. ಅಂದಾಗ ೧೪ರೂಪಾಯಿ ವ್ಯತ್ಯಾಸ ಇದೆ. ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ಹಣ ನಷ್ಟವಾಗುತ್ತದೆ. ಇದರ ಮೇಲೆ ಹದ್ದುಬಸ್ತು ಇಡುವುದಕ್ಕೆ ಯಾವ ಕ್ರಮ ತೆಗೆದು ಕೊಂಡಿದ್ದೀರಿ ? ಇಲ್ಲಿಯವರೆಗೆ ಈ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೆಂದರೆ, ಲಕ್ಷಾಂತರ ರೂಪಾಯಿ ಇದರಿಂದ ಸೋರಿ ಹೋಗುತ್ತಿದೆ ಎಂದರೆ ಒಬ್ಬರೂ ತಮ್ಮ ಗಮನಕ್ಕೆ ತಂದಿಲ್ಲ ಮತ್ತು ಅಧಿಕಾರಿಗಳು ಆಸಕ್ತಿ ವಹಿಸಿ ಕೆಲಸ ಮಾಡಿಲ್ಲವೆಂದು ಅರ್ಥ ವಾಗುವುದಿಲ್ಲವೇ ?

ಇಂಥ ಕೇಸ್‌ಗಳನ್ನು ಬುಕ್ ಮಾಡಿದ್ದೀರಾ ? ಇದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟ ಆಗಿದೆ ? ಇದನ್ನು ಹೇಳಬೇಕು.

ಅಧ್ಯಕ್ಷರು.—ಅವರ ನಜರಿಗೆ ತನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲಾ ನಾವೇ ಅವರ ನಜರಿಗೆ ತರುತ್ತೇವೆಂದರೆ, ಅವರು ಏನು ಮಾಡುವುದು ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇಂಥ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಾಗಲೆಲ್ಲ ಯಾರು ಯಾರು ತಪ್ಪಿ ಕೊಡಗಿನ ಮೂಲುಗಳನ್ನು ಮಾರುತ್ತಾರೋ, ಅವರ ಮೇಲೆ ಕ್ರಮ ಜರಗಿಸುತ್ತಿದ್ದೇವೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಪಟಪಟಿಕ್ಕೆ ರತ್ನಾಕರ್.—ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸ್ಪೆಸಿಫಿಕ್ಕಾಗಿ ಮ್ಯಾಕ್‌ಡೆವೆಲ್ ವಿಸ್ಕೀ ಬಗ್ಗೆ ಕೇಳಿದ್ದಾರೆ. ಅದಕ್ಕೆ ಇಲ್ಲ ಎಂದು ಹೇಳಿದ್ದೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ಅಧ್ಯಕ್ಷರೆ.....

ಅಧ್ಯಕ್ಷರು.—ತಾವು ಎಕ್ಸೈಜ್ ಡಿಮ್ಯಾಂಡ್ ಬಂದಾಗ ಭಾಷಣ ಮಾಡಿ.

ಶ್ರೀ ಎನ್. ಎಂ. ಅಡ್ಯಂತಾಯ.—ಮೂರಾಟ ಮಾಡುವವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಸಪ್ಲೈ ಮಾಡುವಂಥ ತಿಮಿಂಗಲಗಳಿಗೆ ಏನು ಮಾಡಿದ್ದೀರಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಯಾರು ಮೂರಾಟ ಮಾಡುತ್ತಿದ್ದಾರೋ ಅವರ ಮೇಲೆ ದಂಡ ಹಾಕಿ ವಸೂಲು ಮಾಡುತ್ತಿದ್ದೆವು. ಇನ್ನು ಮುಂದೆ ಯಾರು ಆ ಮಾಲನ್ನು ಕೊಡುತ್ತಾರೋ ಆ ಕಂಪೆನಿಗಳ ಮೇಲೂ ಕ್ರಮ ತೆಗೆದುಕೊಳ್ಳುತಕ್ಕ ಹೊಸ ನೀತಿಯನ್ನು ಅನುಸರಿಸುತ್ತೇವೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ.....

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೆ.....

ಅಧ್ಯಕ್ಷರು.—ನಾನು ಆಲೊ ಮಾಡುವುದಿಲ್ಲ. ಪ್ರಶ್ನೆಯನ್ನು ಯಾರು ಹಾಕಿದ್ದಾರೋ ಅವರಿಗೆ ಮಾತ್ರ ಅವಕಾಶ ಕೊಡುತ್ತೇನೆ.

ಶ್ರೀ ಎಂ. ರಾಮಪ್ಪ.—ಹಾಗಾದರೆ ನಾನು ಶಾಸಕ ಅಲ್ಲವೆ ಹೇಳಿ. ಅವಕಾಶ ಕೊಡದಿದ್ದರೆ ನಾನು ಹೊರಗಡೆ ಹೋಗಿಬಿಡುತ್ತೇನೆ.

ಅಧ್ಯಕ್ಷರು.—ಕುಳಿತುಕೊಳ್ಳಿ ಹೇಳುತ್ತೇನೆ.

(ಗೊಂದಲ)

ಶ್ರೀ ಎಂ. ರಾಮಪ್ಪ.—ವಿಷಯ ಗಂಭೀರವಾಗಿದೆ. ನಾನೂ ಪ್ರಶ್ನೆ ಕೇಳಬೇಕಾಗಿದೆ,

ಅಧ್ಯಕ್ಷರು.—ಅವಕಾಶ ಕೊಡುವುದಿಲ್ಲ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಮ್ಯಾಕ್‌ಡೆವೆಲ್ ವಿಸ್ಕೀ ಕಂಪೆನಿಯಿಂದ ಬರುವ ದುಡ್ಡನ್ನು ನನಗೆ ಕಳುಹಿಸಿಕೊಡಲಿ ಎಂದು ಕೇಳುತ್ತಿಲ್ಲ. ದಿವಸಕ್ಕೆ ಕನಿಷ್ಟ ಒಂದು ಕೋಟಿ ರೂಪಾಯಿ ಈ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಎಲ್ಲಾ ಅಂಗಡಿಯಲ್ಲೂ ಸೆಕೆಂಡ್ಸ್ ಇದೆ. ದಾವಣಗೆರೆಯಲ್ಲಿ ಸೆಕೆಂಡ್ಸ್ ಇದೆ. ***

(ಗೊಂದಲ)

MR. SPEAKER.—It will not be recorded. I will expunge..... ಮಾನ್ಯ ಕಾನಡೆಯವರೆ, ತಾವು ಕುಳಿತುಕೊಳ್ಳಬೇಕು. ಇಲ್ಲಿಗೆ ಈ ಕ್ವೆಶ್ಚನ್ ಮುಗಿಯಿತು. ಮಾನ್ಯ ಅಡ್ಮಂತಾಯ ಅವರೆ, ತಾವು ಮುಂದಿನ ಪ್ರಶ್ನೆ ಕೇಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೆ, ನೀವು ಅವರಿಗೆ ಹೇಳಿ. ಏನರ್ಥ ಇದು ? ಮಾಮೂಲಿ ತೆಗೆದುಕೊಳ್ಳುತ್ತಾರೆ ಎಂದು ಅವರು ಹೇಳುತ್ತಾರೆ.

ಶ್ರೀ ಕೆ. ಮಲ್ಲಪ್ಪ.—ಲೋಕಾಯುಕ್ತಕ್ಕೆ ಬರೆಯಬಹುದಾಗಿತ್ತಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಎಕ್ಸ್‌ಪುಂಜ್ ಮಾಡಿರುವುದು ಪ್ರೆಸ್‌ನವರಿಗೆ ಗೊತ್ತಾಗಬೇಕಲ್ಲ. ನಾಳೆ ಪ್ರೆಸ್‌ನಲ್ಲಿ ಬರಬಹುದು. ಇದಕ್ಕೆ ಕ್ವೆಶ್ಚನ್ ಅವರ್ ಎಂದು ಹೇಳುತ್ತಾರೆ. ಮಾನ್ಯ ಸದಸ್ಯರಿಗೆ ಉತ್ತರ ಕೊಟ್ಟಿದ್ದು ಸಮರ್ಪಕವಾಗಿ ಕಾಣದಿದ್ದರೆ ಸಮಾಧಾನವಾಗದಿದ್ದರೆ ರೂಲ್ಸ್ ಪ್ರಕಾರ ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಲಿ. ***ಇದೇನು ಹುಡುಗಾಟಿಕೆಯೇ? ಹಾಗೆ ಏತಕ್ಕೆ ಹೇಳಬೇಕು ? ಬಜೆಟ್ ಭಾಷಣದಲ್ಲಿ ನಾನು ಹೇಳಿದ್ದೇನೆ. ಈ ರೀತಿ ಸೆಕೆಂಡ್ಸ್ ಆಗತಕ್ಕದ್ದು ನಡೆದಿದೆ ಎಂದು ಗೊತ್ತಾಯಿತು ಎಂದು ಹೇಳಿದ್ದೇನೆ, ಅದಕ್ಕಾಗಿ.....

ಶ್ರೀ ಗೋಪಾಲ ಮುಂಕುಂದ ಕಾನಡೆ,—''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅವರು ಹೇಳಲಿ. ನೀವು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಸ್ಪೆಸಿಫಿಕ್ಕಾಗಿ ಒಂದು ವಿಷಯದ ಬಗ್ಗೆ ಕೇಳಿದ್ದರಿಂದ ಅಂಥದ್ದು ನಮ್ಮ ನಜರಿಗೆ ಬಂದಿಲ್ಲ ಎಂದು ಹೇಳಿದ್ದಾರೆ. ಅನೇಕ ಅಂಗಡಿಗಳಲ್ಲಿ ಈ ತರಹ ಹಿಂದೆ ಪರದೆ ಇಟ್ಟು ಕೊಂಡು ಮಾರಾಟ ಮಾಡುತ್ತಾರೆ. ಬಜೆಟ್ ಭಾಷಣದಲ್ಲಿ ನಾನು ಹೇಳಿದ್ದೇನೋ ಇಲ್ಲವೊ ? ಅದಕ್ಕಾಗಿ ನಾನು ದೊಡ್ಡ ದೊಡ್ಡ ಪ್ರಾವಿಷನ್ ಸ್ಟೋರ್ಸ್‌ಗಳಲ್ಲಿ ಜನತಾ ಬಜಾರ್‌ನಲ್ಲಿ ಮಾರಾಟ ಮಾಡಲಿಕ್ಕೆ ಮುಂದೆ ಬಂದರೆ ಅವಕಾಶ ಕೊಡುತ್ತೇವೆ ಎಂದು ಹೇಳಿದ್ದೇನೋ ಇಲ್ಲವೊ ? ಉದ್ದೇಶ ಏನು ? ಸಹಕಾರ ಸಂಘದಲ್ಲಿ ಮಾರಾಟ ಮಾಡಕೂಡದು ಎಂದು ಹೇಳಿದ್ದೀರಿ. ಅದನ್ನು ಒಪ್ಪಿಕೊಂಡೆ. ಎಲ್ಲಿ ದೊಡ್ಡ ಅಂಗಡಿಗಳು ಇರುತ್ತವೆ ಅಲ್ಲಿ ಚುಟ್ಟ ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಹೊಸದಾಗಿ ಲೈಸೆನ್ಸ್ ಕೊಡುವಾಗ ಯಾರ ಮೇಲೆ ಆರೋಪ ಬಂದಿದೆಯೋ, ಅವರ ಲೈಸೆನ್ಸ್ ರದ್ದು ಮಾಡುತ್ತೇವೆ. ಆದ್ದರಿಂದ ಸುಮ್ಮನೆ ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ.

ಅಧ್ಯಕ್ಷರು.—ಮಾಮೂಲಿ ತೆಗೆದುಕೊಳ್ಳುತ್ತಾರೆ ಎಂಬುದನ್ನು ಎಕ್ಸ್‌ಪುಂಜ್ ಮಾಡಿದ್ದೇನೆ.

---

*ಅಧ್ಯಕ್ಷರ ಆದೇಶದ ಮೇರೆಗೆ ಗುರುತಿಸಿದ ಭಾಗವನ್ನು ತೆಗೆದುಹಾಕಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದರ ಮೇಲೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು.—ನೀವು ನೋಟೀಸ್ ಕೊಡಿ.

ರಾಜ್ಯದಲ್ಲಿ ನಡೆಯಲಾದ ಗೋಲೀಬಾರ್ ಪ್ರಕರಣಗಳು

೫೯೪. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾರ್ಚ್ ೧೯೮೩ ರಿಂದ ೩೧ ಡಿಸೆಂಬರ್ ೧೯೮೬ರ ವರೆಗೆ ರಾಜ್ಯದಲ್ಲಿ ನಡೆದಿರುವ ಗೋಲೀಬಾರ್ ಪ್ರಕರಣಗಳೆಷ್ಟು ?

ಆ) ಈ ಗೋಲೀಬಾರ್‌ಗಳಲ್ಲಿ ಮೃತ ಪಟ್ಟವರ ಸಂಖ್ಯೆ ಎಷ್ಟು ?

ಇ) ಮೃತಪಟ್ಟವರಿಗೆ ನೀಡಲಾದ ಪರಿಹಾರ ಧನವೆಷ್ಟು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ)	೧-೩-೮೩ ರಿಂದ ೩೧-೧೨-೮೩	೧೯೮೪	೧೯೮೫	೩೧ ಡಿಸೆಂಬರ್ ೮೬ರ ವರೆಗೆ
ಆ)	೧೦	೩೦	೧೭	೩೦
	೧೦	೧೭	೪	೩೦

ಇ) ೧೯೮೩

———

ರೂ ೭೫,೦೦೦-೦೦

೧೯೮೪

——

ತಲಾ ರೂ. ೭ ೫೦೦-೦೦ ಗಳಂತೆ ಒಟ್ಟು
ರೂ ೧,೨೭,೫೦೦-೦೦

೧೯೮೫

——

ತಲಾ ರೂ ೭,೫೦೦-೦೦ ಗಳಂತೆ ಒಟ್ಟು
ರೂ ೩೦,೦೦೦-೦೦

೧೯೮೬

——

ತಲಾ ರೂ ೭,೫೦೦-೦೦ ಗಳಂತೆ ೪ ಜನರಿಗೆ ರೂ ೩೦,೦೦೦-೦೦, ತಲಾ ರೂ ೨೦,೦೦೦ ಗಳಂತೆ ೨೬ ಜನರಿಗೆ ಒಟ್ಟು ರೂ ೫.೩೦,೦೦೦-೦೦

ಶ್ರೀ ಎನ್. ಎಂ. ಅಡ್ಯಂತಾಯ:—ಗೋಲಿಬಾರ್ ಆದ ತಕ್ಷಣ ನ್ಯಾಯಾಂಗ ವಿಚಾರಣೆಗೆ ಘೋಷಣೆ ಮಾಡಿ. ಸತ್ತವರ ಬಗ್ಗೆ ಕಾಳಜಿಯನ್ನು ವಹಿಸಿ ಅವರ ಬಗ್ಗೆ ಕಣ್ಣೀರು ಸುರಿಸುವಂತಹ ಸರ್ಕಾರ, ಹಾಗೂ ಗೃಹ ಮಂತ್ರಿಗಳು, ಅಧಿಕಾರಿಗಳು ಮಾಡಿರುವ ಶಿಫಾರಸ್ಸನ್ನು ಜಾರಿಗೆ ತರುವಲ್ಲಿ ಅದೇರೀತಿಯ ಕಾಳಜಿಯನ್ನು ಏಕೆ ವಹಿಸುತ್ತಿಲ್ಲ ? ಉದಾಹರಣೆಗೆ ಹೇಳುವುದಾದರೆ, ಮೂಲೂರಿನಲ್ಲಿ ಆದಂತಹ ಗೋಲಿಬಾರ್ ಪ್ರಕರಣದಲ್ಲಿ ಕಮೀಷನ್, specifically implicated 3 officers, but the Government has not yet taken action against